ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ವಲಯ

ಸಂಖ್ಯೆ:ಬೃ.ಬೆಂ.ಮ.ಪಾ/ಮು.ಅ/ತಾಂ.ಮ/ಯ.ವ/ಪಿ.ಆರ್/3034/2020-21

ಮುಖ್ಯಅಭಿಯಂತರವರ ಕಛೇರಿ
ಯಲಹಂಕ ವಲಯ,ಬೃ.ಬೆಂ.ಮ.ಪಾ.
ಬೆಂಗಳೂರು -92
ದಿನಾಂಕ: 10.03.2020

ತಾಂತ್ರಿಕ ಮಂಜೂರಾತಿ

ವಿಷಯ: Imrprovements to main and cross road at Bharath Gowda Layout and GKVK Layout in Kempegowda ward no-01 of Yelahanka sub division.

ಉಲ್ಲೇಖ: ಲೆಕ್ಕಶೀರ್ಷಿಕೆ ಪಿ-1802, ಜಾಬ್ ಸಂಕೇತ:001-20-0000

* * * * *

ಮೇಲಿನ ವಿಷಯ ಹಾಗೂ ಉಲ್ಲೇಖದಲ್ಲಿ ತಿಳಿಸಿರುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ಯಲಹಂಕ ವಲಯರವರು 2019-20ನೇ ಸಾಲಿನ ಆಯವ್ಯಯದ ಪಿ-3926 ರಡಿಯಲ್ಲಿ ತಾಂತ್ರಿಕ ಮಂಜೂರಾತಿಯನ್ನು ಕೋರಿರುವ ಮೇರೆಗೆ, ಮಾನ್ಯ ಆಯುಕ್ತರು ನಿಯೋಜಿಸಿರುವ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂ:ಬಿ12(1)ಪಿ.ಆರ್/394/2019-20, ದಿನಾಂಕ:25-09-2019ರಂತೆ ಸದರಿ ಕಾಮಗಾರಿಗೆ ರೂ.40.00ಲಕ್ಷಗಳಿಗೆ (ರೂ.ನಲವತ್ತು ಲಕ್ಷಗಳು ಮಾತ್ರ) ತಾಂತ್ರಿಕ ಮಂಜೂರಾತಿ ನೀಡಲಾಗಿದೆ ಮತ್ತು ತಾಂತ್ರಿಕ ಮಂಜೂರಾತಿಯ ಪುಸ್ತಕದ ಪುಟ ಸಂಖ್ಯೆ 27 ಕ್ರಮ ಸಂಖ್ಯೆ3034ರಲ್ಲಿ ನಮೂದಿಸಿ, ಈ ಕೆಳಗಿನ ಷರತ್ತುಗಳಿಗೊಳಪಡಿಸಿ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಸಹಿ/-
ಮುಖ್ಯ ಅಭಿಯಂತರರು (ಯಲಹಂಕ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಷರತ್ತುಗಳು:

1. ಮಾನ್ಯ ಆಯುಕ್ತರವರ ಕಛೇರಿ ಸುತ್ತೋಲೆ ಸಂಖ್ಯೆ: ಆಯುಕ್ತರು/ಪಿಆರ್/176/15-16 ದಿನಾಂಕ: 22.12.2015 ರ ಆದೇಶದ ಮೇರೆಗೆ ಸದರಿ ಕಾಮಗಾರಿಯನ್ನು ಇನ್ಯಾವುದೆ ಅನುದಾನದ ಯೋಜನೆಯಲ್ಲಿ ಕೈಗೆತ್ತಿಗೊಂಡಿರುವುದಿಲ್ಲವೆಂದು ಅಥವಾ ಕಾಮಗಾರಿಗಳು ಪುನಾರವರ್ತಿತವಾಗಿಲ್ಲವೆಂದು ಹಾಗೂ ಈಗಾಗಲೇ ಚಾಲ್ತಿಯಲ್ಲಿರುವ/ಪೂರ್ಣಗೊಂಡಿರುವ ಕಾಮಗಾರಿಗಳು ಅಥವಾ ಲೋಕಾಯುಕ್ತ / ಯಾವುದೇ ಇಲಾಖಾ ವಿಚಾರಣೆ ಹಂತದಲ್ಲಿರುವ ಕಾಮಗಾರಿಗಳು ಸದರಿ ಕ್ರಿಯಾಯೋಜನೆಯಲ್ಲಿ ಸೇರ್ಪಡೆಮಾಡಿರುವುದಿಲ್ಲವೆಂದು ಅಥವಾ ಪುನರಾವರ್ತಿತವಾಗಿಲ್ಲವೆಂದು, ಕಾಮಗಾರಿ ಪ್ರಾರಂಭವಾಗುವ ಪೂರ್ವದಲ್ಲೇ ಸಂಬಂಧಪಟ್ಟ ಕಾ.ಪಾ.ಅ/ಸ.ಕಾ.ಪಾ.ಅ/ವಾರ್ಡ್ ಅಭಿಯಂತರವರು ಸ್ಥಳ ಪರಿಶೀಲಿಸಿ ದೃಢೀಕರಿಸಿ, ಖಚಿತಪಡಿಸಿಕೊಂಡ ನಂತರವಷ್ಟೆ ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಷರತ್ತಿಗೊಳಪಡಿಸಿದೆ.
2. ಟೆಂಡರ್ ಆಹ್ವಾನಿಸುವ ಮುನ್ನ ಸಂಬಂಧಪಟ್ಟ ಸಮಿತಿಯಿಂದ ಅನುಮೋದನೆ ಪಡೆದು ನಿಯಮಾನುಸಾರ ಕ್ರಮಕೈಗೊಳ್ಳುವುದು.
3. ರೂ 1.00 ಲಕ್ಷಗಳಿಗಿಂತ ಮೇಲ್ಪಟ್ಟ ಎಲ್ಲಾ ಕಾಮಗಾರಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಕೈಗೊಳ್ಳುವುದು.
4. ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.

ಮುಂದಿನ...

5. ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ:876(ಪಿ-1)ವೆಚ್ಚ12-17, ದಿನಾಂಕ:12-10-2017 ರಂತೆ ಕಡ್ಡಾಯವಾಗಿ ರೂ 50.00ಲಕ್ಷಗಳನ್ನು ಮೀರಿದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸುವ ಸಮಯದಲ್ಲಿ Randomization ಮೂಲಕ ಕಾಮಗಾರಿಗಳನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಮೀಸಲಿಡುವ ಸಂಬಂಧ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು.
6. ಮಾನ್ಯ ಆಯಯುಕ್ತರು ರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಬಿಬಿಎಂಪಿ/ಆ/ಪಿಆರ್/6166/2019-20 ದಿನಾಂಕ:13-12-2019 ರಂತೆ ಸೂಕ್ತ ಕ್ರಮಕ್ಕೈಗೊಳ್ಳುವುದು.
7. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ-1999 ಮತ್ತು ನಿಯಮ-2000 ಹಾಗೂ ಸರ್ಕಾರ ನಿಗಧಿಪಡಿಸಿರುವ Standard Bidding Documents ಅನ್ನು ಅಳವಡಿಸಿಕೊಂಡು ನಿರ್ವಹಿಸುವುದು.
8. ಸಕ್ಷಮ ಪ್ರಾಧಿಕಾರದಿಂದ ಕರಡು ಟೆಂಡರ್ ಪ್ರತಿಯನ್ನು ಅನುಮೋದನೆ ಪಡೆಯುವುದು.
9. ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
10. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೋಟೇಶನ್ ಕರೆದು ಅನುಮೋದನೆ ಪಡೆಯುವುದು.
11. ರಸ್ತೆ ಇತಿಹಾಸ ಪುಸ್ತಕದಲ್ಲಿ ಕಾಮಗಾರಿಯ ಕೆಲಸಗಳಾದ ಚಿಪ್‌ಕಾರ್ಪೆಟಿಂಗ್, ಜೆಲ್ಲಿರಸ್ತೆ, ಡಾಂಬರೀಕರಣದ ಕೆಲಸವನ್ನು ನಮೂದಿಸುವುದು.
12. ರಸ್ತೆಗೆ ಬಿ.ಎಂ/ ಡಿ.ಬಿ.ಎಂ ಹಾಕಿದ್ದಲ್ಲಿ Benkelman Beam Deflection reportನ್ನು ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.
13. ನಿಗಧಿತ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವುದು. ಸಾಧ್ಯವಾಗದ ಪಕ್ಷದಲ್ಲಿ ಕಾಲಾವಧಿ ವಿಸ್ತರಣೆಯನ್ನು ಸೂಕ್ತ ಸಮಜಾಯಿಷಿಯೊಂದಿಗೆ/ವಿವರವಾದ ಸಮಂಜಸವಾದ ವರದಿ ನೀಡಿ ಕಾಲಾವಧಿ ವಿಸ್ತರಣೆ ಪಡೆಯುವುದು.
14. ಸದರಿ ಕೈಗೊಳ್ಳುವ ಕಾಮಗಾರಿಯು ಪುನರಾವರ್ತನೆ ಅಥವಾ ನಕಲು ಆಗಿರುವುದಿಲ್ಲವೆಂಬ ಬಗ್ಗೆ ಸಂಬಂಧಪಟ್ಟ ಅಭಿಯಂತರರು ಟಿಪ್ಪಣಿ ಹಾಳೆಯಲ್ಲಿ ಹಾಗೂ ಅಂದಾಜು ಪಟ್ಟಿಯಲ್ಲಿ ದೃಢೀಕರಿಸುವುದು.
15. ಮೇಲಾಧಿಕಾರಿಗಳಿಗೆ ಮಾಹಿತಿ ಒದಗಿಸುವಲ್ಲಿ ಮರೆಮಾಚಿದಲ್ಲಿ ಹಾಗೂ ಅಂದಾಜು ಪಟ್ಟಿ ತಯಾರಿಸುವಲ್ಲಿ ಯಾವುದಾದರೂ ಲೋಪದೋಷಗಳು ಕಂಡು ಬಂದಲ್ಲಿ ಸಂಬಂಧಪಟ್ಟ ವಾರ್ಡ್‌ನ ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಕಾರ್ಯಪಾಲಕ ಅಭಿಯಂತರರನ್ನೇ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.
16. ಕಾಮಗಾರಿಯ ಗುಣಮಟ್ಟವನ್ನು ಕಾಯ್ದಿರಿಸುವ ಬಗ್ಗೆ ಸಂಬಂಧಪಟ್ಟ ವಾರ್ಡಿನ ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಕಾರ್ಯಪಾಲಕ ಅಭಿಯಂತರರನ್ನು ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬಿ.ಬಿ.ಎಂ.ಪಿ ಬೆಂಗಳೂರು-92

ಪ್ರತಿಯನ್ನು:
1) ಕಾರ್ಯಪಾಲಕ ಅಭಿಯಂತರರು (ಗುಣ ನಿಯಂತ್ರಣ) ವಿಭಾಗ ರವರ ಮಾಹಿತಿಗಾಗಿ.
2) ಕಾರ್ಯಪಾಲಕ ಅಭಿಯಂತರರು, (ಯಲಹಂಕ ವಿಭಾಗ) ರವರ ಮಾಹಿತಿಗಾಗಿ